ನಮ್ಮ ಅಧಿಕಾರಾವಧಿಯಲ್ಲಿ ನಾವು ಯಾವ ರೀತಿಯಾಗಿ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು. ಅಧಿಕಾರಿಗಳು ಶಾಸಕರ ಮಾತನ್ನು ಯಾವ ರೀತಿಯಾಗಿ ಪಾಲನೆ ಮಾಡಬೇಕಾಗಿದೆ? ಅದರ ಬಗ್ಗೆ ಕಟ್ಟುನಿಟ್ಟಿನ ಆದೇಶವನ್ನು ಎಲ್ಲ ಅಧಿಕಾರಿಗಳಿಗೆ ಕಳುಹಿಸಿದರೆ ಸಮಂಜಸವಾಗುತ್ತದೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ 50 ವರ್ಷಗಳಿಂದ ದಲಿತವರ್ಗದ ಜನ ಕಾಂಗ್ರೆಸ್ ಪಕ್ಷಕ್ಕೆ ತಮ್ಮನ್ನು ಮೀಸಲಾಗಿಟ್ಟಿದ್ದಾರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದಾರೆಂದು ನನಗೆ ಒಬ್ಬ ಸಹೋದ್ಯೋಗಿ ಹೇಳುತ್ತಿದ್ದರು.

4. ಪ್ರಕಟಣೆ

MR.DEPUTY SPEAKER: There is an announcement. It is my privilege to bring to the notice of the House that Lt. Governor his Excellency Mr.Mark schewicker and fifteen members of the Delegation of pensylvani, USA are witnessinof the proceedings of the House in the officers gallery. On behalf of all the Members, I welcome them.

ಶ್ರೀ ಎ.ನಾರಾಯಣಸ್ವಾಮಿ: ನಮಗೆ ರಕ್ಷಣೆ ಕೊಡುವ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷವೆಂದು ದಲಿತರ ಭಾವನೆಯಲ್ಲಿ ಬೇರೂರಿದೆ. ಅವರ ಒಂದು ಮತದಿಂದ ಇವತ್ತು ಅಧಿಕಾರವನ್ನು ಪಡೆದಂತಹ ತಾವು ದಲಿತರ ರಕ್ಷಣೆಯನ್ನು ಮಾಡಲಿಲ್ಲವೆಂದು ಹೇಳಿದರೆ ಮತ್ತೇ ಯಾರು ದಲಿತರ ರಕ್ಷಣೆಯನ್ನು ಮಾಡುತ್ತಾರೆ? ಇಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ದಲಿತರ ಮತಗಳ ಬಗ್ಗೆ ದೃಢವಾಗಿ ಹೇಳುವುದಾದರೆ 20 ಪರ್ಸೆಂಟ್ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರ್ಗದ ಜನ ಯಾವ ಪಕ್ಷಕ್ಕೆ ತಮ್ಮ ಮತವನ್ನು ಕೊಡುತ್ತಾರೆ, ಅದೆ ಪಕ್ಷ ಇವತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ. ಅವರ ಆಧಾರದ ಮೇಲೆ ಅಡಳಿತ ನಡೆಸತಕ್ಕಂತಹ ನಾವು ನೈತಿಕ ಹೊಣೆ ಮತ್ತು ಅವರಿಗೆ ರಕ್ಷಣೆಯನ್ನು ನೀಡುವ ಜವಾಬ್ದಾರಿ ನಮ್ಮ ಮೇಲಿದೆ. ನಾನು ಕಂಬಾಲಪಲ್ಲಿ ಗ್ರಾಮಕ್ಕೆ ಭೇಟಿ ನೀಡಿದ್ದೇನೆ. ಆ ಗ್ರಾಮದಲ್ಲಿ ಈ ರೀತಿಯ ವೈಷಮ್ಯ ಇರುವಾಗ ನೀವು ಯಾವ ರೀತಿಯಾಗಿ ಇಲ್ಲಿ ಜೀವನ ಮಾಡುತ್ತೀರೆಂದು ನಾನು ಅವರಿಗೆ ಪ್ರಶ್ನೆಯನ್ನು ಮಾಡಿದೆ. ಆಗ ಅವರು ಹೇಳಿದರು ಹಿಂದೆ ಒಂದು ಕಗ್ಗೊಲೆ ನಡೆದಾಗ ನಾವು ಈ ಊರನ್ನು ಬಿಟ್ಟುಹೋಗಿದ್ದೆವು. ಈ ಗ್ರಾಮಕ್ಕೆ ಮರಳಿ ಬರುವ